ಶ್ರೀ ಹೆಚ್.ಡಿ. ದೇವೇಗೌಡ.—ನಾವು ಈಗಾಗಲೇ ೬ ಕೋಟಿ ರೂ. ಅನ್ನು ಸ್ಪಿಲ್‌ವೇ ಕೆಲಸ ಕ್ಕೆಂದು ಇಟ್ಟಿದ್ದೇವೆ ಈ ಕೆಲಸಕ್ಕೆ ಟೆಂಡರ್ ಕರೆಯಬೇಕೆಂದು ನಿರ್ಣಯ ಈಗ ಆಗಿದೆ. ಮಾನ್ಯ ಮಾಜಿ ಮಂತ್ರಿಗಳಾದ ಶ್ರೀ ಧರ್ಮಸಿಂಗ್ ರವರು ಅವರ ಕಾಲದಲ್ಲಿ ನಾಲ್ಕೂವರೆ ಕೋಟಿ ರೂಪಾಯಿ ಮಂಜೂರು ಮಾಡಿದ್ದಾರೆಂದು ಹೇಳಿದರು ಅದಕ್ಕೆ ಸರ್ಕಾರೀ ಆಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಕೊಡುವು ದಕ್ಕೆ ಮತ್ತು ವೇರಿಯಸ್ ಫೈನಾನ್ಸ್ ಇನ್‌ಸ್ಟಿಟ್ಯೂಷನ್‌ನಿಂದ ಹಣವನ್ನು ಪಡೆದುಕೊಳ್ಳುವುದಕ್ಕೆ ಸ್ವಲ್ಪ ವಿಳಂಬವಾಗುತ್ತಿದೆಯೆಂದು ಅವರಿಗೆ ಗೊತ್ತಾಗಿದೆ. ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡಿ ನವರು ೩ ಕೋಟಿ ರೂಪಾಯಿಗಳ ಹಣವನ್ನು ಕೊಡುವುದಕ್ಕೆ ಅವರಿಗೆ ಸಧ್ಯಕ್ಕೆ ಸಾಧ್ಯವಿಲ್ಲವೆಂದು ಕಾಣುತ್ತದೆ. ಅವರು ಆ ಹಣವನ್ನು ಡಿಪಾಜಿಟ್ ಮಾಡಿದ ತಕ್ಷಣ, ಈ ೬ ಕೋಟಿ ರೂಪಾಯಿ ಸ್ಕೀಮಿನ ಸ್ಪಿಲ್‌ವೇ ಯೋಜನೆ ಏನಿದೆ, ಅದನ್ನು ಆದಷ್ಟು ಬೇಗ ಮುಗಿಸಬಹುದು. ಇದರಿಂದ ನೀರನ್ನು ಸ್ಟೋರ್ ಮಾಡುತ್ತೇವೆ. ಫಸ್ಟ್ ಪ್ರಿಫರೆನ್ಸ್ ಗುಲ್ಬರ್ಗ ಸಿಟಿಗೆ ಕೊಡುತ್ತೇವೆ. ಆಮೇಲೆ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಧರ್ಮಸಿಂಗ್ ನಾರಾಯಣ್‌ಸಿಂಗ್.—ಈ ಪ್ರಶ್ನೆ ಬಹಳ ಪ್ರಾಮುಖ್ಯವಾದುದಾಗಿದೆ.

ಅಧ್ಯಕ್ಷರು.—ಎಲ್ಲಾ ಪ್ರಶ್ನೆಗಳು ಬಹಳ ಪ್ರಾಮುಖ್ಯವಾದುದು. ಎಲ್ಲರಿಗೂ ಅವಕಾಶವನ್ನು ಮಾಡಿಕೊಡುವುದು ನನ್ನ ಕರ್ತವ್ಯ. ತಾವು ಹಾಫ್ ಅನ್ ಅವರ್ ಡಿಸ್‌ಕಷನ್‌ಗೆ ಕಳಿಸಿಕೊಡಿ. ಆವ ಕಾಶವನ್ನು ಮಾಡಿಕೊಡುತ್ತೇನೆ.

ಹುಬ್ಬಳ್ಳಿ ಶೋಲಾಪುರ ರಾಷ್ಟ್ರೀಯ ಹೆದ್ದಾರಿ ಮೇಲೆ ಅನಗವಾಡಿ ಹತ್ತಿರ ಘಟಪ್ರಭಾ ನದಿಗೆ ಅಡ್ಡಲಾಗಿ ಸೇತುವೆ ಕಟ್ಟುವ ಬಗ್ಗೆ

೨೨೧ (೭೩೨) ಶ್ರೀ ಬಾಬುರೆಡ್ಡಿ ಎಂ. ತುಂಗಲ್ (ಬಿಳಗಿ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಹುಬ್ಬಳ್ಳಿ–ಶೋಲಾಪುರ ರಾಷ್ಟ್ರೀಯ ಹೆದ್ದಾರಿ ಮೇಲೆ ಅನಗವಾಡಿ ಹತ್ತಿರ ಘಟಪ್ರಭಾ ನದಿಗೆ ಅಡ್ಡಲಾಗಿ ಸೇತುವೆ ಕಟ್ಟುವ ಸಲಹೆ ತಯಾರಾಗಿ ಸರ್ಕಾರದ ಮುಂದೆ ಇದೆಯೇ ?

ಆ) ಹಾಗಿದ್ದಲ್ಲಿ ಈ ಸೇತುವೆಯ ನಿರ್ಮಾಣದ ಬಗ್ಗೆ ಈವರೆಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಇ) ಸದರಿ ಸೇತುವೆಯ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗು ವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹುಬ್ಬಳ್ಳಿ–ಶೋಲಾಪುರ ರಾಜ್ಯ ಹೆದ್ದಾರಿಯ ಮೇಲೆ ಅನಗವಾಡಿ ಹತ್ತಿರ ಘಟಪ್ರಭಾ ನದಿಗೆ ಸೇತುವೆ ಕಟ್ಟುವ ಪ್ರಸ್ತಾಪನೆ ಇದೆ.

ಆ) ೨೪೦.೦೦ ಲಕ್ಷ ರೂ.ಗಳಅಂದಾಜುಪಟ್ಟಿಗೆ ಆಡಳಿತ ಮಂಜೂರಾತಿಯನ್ನು ನೀಡಲಾಗಿದೆ.

ಇ) ಈ ಕೆಲಸವು ೧೯೯೦ರ ವೇಳೆಗೆ ಮುಗಿಯಬಹುದು.

ಶ್ರೀ ಬಾಬುರೆಡ್ಡಿ ಎಂ. ತುಂಗಲ್.—ಬೀಳಗಿ ತಾಲ್ಲೂಕಿನ ಅನೇಕ ಭಾಗಗಳಲ್ಲಿ ಮುಳುಗಡೆ ನೆವದಿಂದ ಅನೇಕ ಕಾರ್ಯಗಳು ಸ್ಥಗಿತವಾಗಿವೆ. ಈ ಯೋಜನೆಯನ್ನು ಕೈ ಬಿಡುವ ಯೋಚನೆ ಇದೆಯೇ ? ೨೪೦.೦೦ ಲಕ್ಷ ರೂ.ಗಳ ಅಂದಾಜಿಗೆ ಮಂಜೂರಾತಿಯನ್ನು ನೀಡಲಾಗಿದೆಯೆಂದು ಹೇಳಿದ್ದೀರಿ ಮತ್ತು ಈ ಕೆಲಸವು ೧೯೯೦ರ ಹೊತ್ತಿಗೆ ಮುಗಿಯಬಹುದೆಂದು ಹೇಳಿದ್ದೀರಿ. ಈ ಕೆಲಸವನ್ನು ಆದಷ್ಟು ಬೇಗ ಮುಗಿಸಲು, ಈಗಾಗಲೇ ಇದಕ್ಕೆ ಅಡಿಗಲ್ಲನ್ನು ಹಾಕಿ, ಇದನ್ನು ಏತಕ್ಕೆ ಕಾರ್ಯಾರಂಭ ಮಾಡಬಾರದು ?

ಶ್ರೀ ಹೆಚ್.ಡಿ. ದೇವೇಗೌಡ.—ಈ ಕೆಲಸವನ್ನು ಕೈ ಬಿಡುವ ಪ್ರಶ್ನೆಯೇ ಇಲ್ಲ. ಸೆಂಟ್ರಲ್ ಸಿ.ಆರ್.ಎಸ್.ಫಂಡ್‌ನಿಂದ ೧೨೫ ಲಕ್ಷ ರೂಪಾಯಿಗೆ ಮಂಜೂರಾತಿ ಸಿಗಬೇಕು. ಆದುದರಿಂದ ಈ

ಕೆಲಸವನ್ನು ತೆಗೆದುಕೊಳ್ಳುವುದಕ್ಕಾಗಲಿಲ್ಲ. ಈ ಸಂದರ್ಭದಲ್ಲಿ ಹಿಂದೆ ಆದಂತಹ ಘಟನೆಗಳನ್ನು ನಾನು ಸ್ಮರಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಸೆಟ್ಟಲ್‌ಮೆಂಟಿನವರು ನಾವು ೧೨೫ ಲಕ್ಷರೂ.ಗಿಂತ ಜಾಸ್ತಿ ಕೊಡುವುದಕ್ಕಾಗುವುದಿಲ್ಲ. ಇದನ್ನು ಸ್ಟೇಟ್ ಸೆಕ್ಟಾರ್‌ನಲ್ಲಿ ಮಾಡಿಕೊಳ್ಳಿ, ಎಂದು ಅಂತಿಮ ನಿರ್ಣಯವನ್ನು ಕೊಟ್ಟಮೇಲೆ ಇದನ್ನು ಪ್ಲಾನ್ ಕೃಷ್ಣಾ ಪ್ರಾಜೆಕ್ಟ್‌ನಿಂದ ಚಾರ್ಜ್ ಆಫ್ ಮಾಡಿ ೨೪೧.೦೦ ಲಕ್ಷ ರೂ.ನಿಂದ ಅಂಗನವಾಡಿ ಹತ್ತಿರ ಸೇತುವೆ ಕಟ್ಟಬೇಕೆಂದು ತೀರ್ಮಾನ ಮಾಡಿದ್ದೇವೆ. ಈಗಾಗಲೇ ಟೆಂಡರ್ ಕರೆಯುವುದಕ್ಕೆ ನೋಟಿಫಿಕೇಷನ್ ಅಪ್ರೂವ್ ಮಾಡಿದ್ದಾರೆಂದು ಕಾಣುತ್ತದೆ. ಈ ಕೆಲಸವನ್ನು ಆದಷ್ಟು ಬೇಗ ಪ್ರಾರಂಭ ಮಾಡುತ್ತೇವೆ. ಇದರ ಬಗ್ಗೆ ಯಾವುದೇ ಸಂಶಯ ಇಲ್ಲ.

ಶ್ರೀ ಬಾಬುರೆಡ್ಡಿ ಎಂ. ತುಂಗಲ್.—ಈ ಭಾಗದ ಜನರಿಗೆ ಈ ರಸ್ತೆ ಬಹಳ ಪ್ರಾಮುಖ್ಯವಾಗಿರುವುದರಿಂದ ಈ ಕೆಲಸವನ್ನು ಈಗಲೇ ತೀವ್ರಗತಿಯಲ್ಲಿ ತೆಗೆದುಕೊಂಡು ಈಗಲೇ ಏತಕ್ಕೆ ಪ್ರಾರಂಭ ಮಾಡಬಾರದು ?

ಶ್ರೀ ಹೆಚ್.ಡಿ. ದೇವೇಗೌಡ.—ನಾವು ಏನಾದರೂ ಮಾಡಿ ಈ ೩೦ ವರ್ಷದ ಸಮಸ್ಯೆಯನ್ನು ಬಗೆಹರಿಸಬೇಕೆಂದು ಇದಕ್ಕೆ ಮಂಜೂರಾತಿ ಕೊಟ್ಟಿದ್ದೇವೆ. ಇದರ ತೀವ್ರತೆಯನ್ನು ಅರ್ಥ ಮಾಡಿಕೊಂಡು ಸರ್ಕಾರ ಇದರ ಬಗ್ಗೆ ಮಂಜೂರಾತಿ ಕೊಟ್ಟಿದೆ.

ಘಟಪ್ರಭಾ ಬಲದಂಡೆ ಕಾಲುವೆ

೨೨೨ (೭೩೬) ಶ್ರೀ ಜಿ.ವಿ. ಪುಟ್ಟೂರು (ಜಾಗಲಕೋಟೆ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ :—

ಘಟಪ್ರಭಾ ಬಲದಂಡೆ ಕಾಲುವೆಯನ್ನು ಯಾವಾಗ ಪ್ರಾರಂಭಿಸಲಾಯಿತು ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

೧೯೭೨-೭೩ನೇ ಇಸವಿಯಲ್ಲಿ ಬರಗಾಲ ಕಾಮಗಾರಿಯಲ್ಲಿ ಪ್ರಾರಂಭಿಸಲಾಯಿತು. ಏಳನೆ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ಣಗೊಳಿಸಲು ಯೋಜಿಸಲಾಯಿತು. ಘಟಪ್ರಭಾ ಯೋಜನೆಗೆ ಈಗಾಗಲೇ ೫೨ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಇದನ್ನು ಪೂರ್ತಿಯಾಗಿ ಪೂರೈಸುವುದಕ್ಕೆ ಇನ್ನು ೧೫೫ ಕೋಟಿ ರೂಪಾಯಿ ಹಣ ಬೇಕು. ಸರ್ಕಾರದ ಕಷ್ಟವನ್ನು, ಸದನದ ಮುಖೇನ ಈ ದೇಶದ ಜನರಿಗೆ ಹೇಳುತ್ತೇನೆ. ವರ್ಲ್ಡ್ ಬ್ಯಾಂಕಿನಿಂದ ಈ ಹಣವನ್ನು ದೊರಕಿಸಿಕೊಳ್ಳುವಲ್ಲಿ ಸರ್ಕಾರ ತೀವ್ರವಾದಂತಹ ಪ್ರಯತ್ನವನ್ನು ಮಾಡುತ್ತಿದೆ.

ಶ್ರೀ ಜಿ. ವಿ. ಪುಟ್ಟೂರ್.—ಮಾನ್ಯ ಮಂತ್ರಿಗಳು ಇದನ್ನು ಘಟಪ್ರಭಾ ಯೋಜನೆಯಲ್ಲಿ ಸೇರಿಸಿದ್ದೇವೆಂದು ತಿಳಿಸಿದ್ದಾರೆ. ಮಾನ್ಯ ಮಂತ್ರಿಗಳಲ್ಲಿ ನಾವು ಕೇಳಿಕೊಳ್ಳುವುದೇನೆಂದರೆ, ನಮ್ಮ ಭಾಗ ಕಳೆದ ೧೦ ವರ್ಷಗಳಿಂದ ಬರಗಾಲ ಪೀಡಿತ ಪ್ರದೇಶವಾಗಿದೆ. ಆದ್ದರಿಂದ ಇದನ್ನು ಬರಗಾಲದ ಸ್ಕೀಮಿನಲ್ಲಿ ಈ ಒಂದು ಕೆಲಸವನ್ನು ಮುಗಿಸಿಕೊಟ್ಟರೆ, ಅದರಿಂದ ರೈತ ಭಾಂದವರಿಗೆ ಸಹಾಯವಾಗಿದಂತಾಗುತ್ತದೆ. ಹಾಗೆ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮೊಯ್ಲಿಯವರು, ಬರಗಾಲ ಸ್ಕೀಮಿನಲ್ಲಿ ಸ್ವಲ್ಪ ಹಣವನ್ನು ಕೊಡುವುದಾದರೆ, ಈ ಕೆಲಸ ಬೇಗ ಮುಗಿಯುತ್ತದೆ. ಅವರು ಇದಕ್ಕೆ ಹಣವನ್ನು ಕೊಡಿಸಬೇಕೆಂದು, ನಾನು ಅವರಲ್ಲಿ ವಿನಂತಿ ಮಾಡುತ್ತೇನೆ.

ಸಂತೇಬಾಚಹಳ್ಳಿ ಬೆಟ್ಟದಹಳ್ಳಿ ಬಾರ್ಡರ್ ರಸ್ತೆಯ ಸುಧಾರಣೆ ಕುರಿತು

೨೨೩ (೪೩೩) ಶ್ರೀ ಕೃಷ್ಣ (ಕೃಷ್ಣರಾಜಪೇಟೆ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಸಂತೇಬಾಚಳ್ಳಿ-ಬೆಟ್ಟದಹಳ್ಳಿ ಗಡಿ ರಸ್ತೆ ಯಾರ ಅಧೀನದಲ್ಲಿದೆ ?